ಜನಪ್ರತಿನಿಧಿ

# ಅಧಿಕಾರಶಾಹಿ ಆಡಳಿತದ ಹೆಬ್ಬಾಸೆಗೆ ಗ್ರಾಮ ಸಭೆಯ ಹಕ್ಕುಗಳಿಗೆ ಕತ್ತರಿ

2016ರ ಆರಂಭ ಕರ್ನಾಟಕ ರಾಜ್ಯದಲ್ಲಿ ಒಂದು ಹೊಸ ಮೈಲಿಗಲ್ಲು ಸಾಧಿಸಿದ ವರ್ಷ. ಗ್ರಾಮ ಸ್ವರಾಜ್ಯದ ಕಲ್ಪನೆಯ ಕನಸನ್ನು ಹೊತ್ತು ರಾಜ್ಯ ಸರ್ಕಾರವು ಶ್ರೀ ರಮೇಶ ಕುಮಾರ್ ಅವರ ಅಧ್ಯಕ್ಷತೆಯಲ್ಲಿ ಕರ್ನಾಟಕ ಪಂಚಾಯತ್ ರಾಜ್ ಕಾಯಿದೆ ತಿದ್ದುಪಡಿ ಸಮಿತಿಯ ಶಿಫಾರಸ್ಸುಗಳನ್ನು ಗಂಭೀರವಾಗಿ ಪರಿಗಣಿಸಿ, ಕರ್ನಾಟಕ ಪಂಚಾಯತ್ ರಾಜ್ ಕಾಯಿದೆಗೆ ಮಹತ್ತರವಾದ ತಿದ್ದುಪಡಿಗಳನ್ನು ತಂದಿತು. 'ಕರ್ನಾಟಕ ಗ್ರಾಮ ಸ್ವರಾಜ್ ಹಾಗೂ ಪಂಚಾಯತ್ ರಾಜ್ ಕಾಯಿದೆ' ಎಂದು ಪುನರ್‌ನಾಮಕರಣದೊಂದಿಗೆ ಈ ತಿದ್ದುಪಡಿ ಕಾಯಿದೆ ಇದೇ ವರ್ಷ ಫೆಬ್ರವರಿ 25ರಿಂದ ಜಾರಿಯಾಗಿದೆ ಎಂದು ಅಧಿಸೂಚನೆ ಹೊರಡಿಸಲಾಯಿತು. ಆ ಮೂಲಕ ಗ್ರಾಮ ಸರ್ಕಾರದ ಆಡಳಿತಕ್ಕೆ ಒತ್ತು ನೀಡಿ, ಗ್ರಾಮ ಸಭೆಯ ಹಕ್ಕನ್ನು ಎತ್ತಿಹಿಡಿದು ಗ್ರಾಮ ಸಭೆಯನ್ನು ಸ್ಥಳೀಯ ಸ್ವಯಂ ಸರ್ಕಾರದ ಮೂಲ ಘಟಕ ಎಂದು ಪುನರುಚ್ಛರಿಸಿತು. ಮಾನ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವರಾದ ಶ್ರೀ ಹೆಚ್.ಕೆ.ಪಾಟೀಲ್ ಅವರ ನೇತೃತ್ವದಲ್ಲಿ ರಾಜ್ಯ ಸರ್ಕಾರವು ಗಾಂಧಿ ಕಂಡ ಕನಸನ್ನು ನನಸು ಮಾಡುವಲ್ಲಿ ತ್ರಿಸ್ಥರ ಪಂಚಾಯತ್ ವ್ಯವಸ್ಥೆಗೆ ಒಂದು ಹೊಸ ಭಾಷ್ಯವನ್ನೇ ಬರೆಯಿತು ಎಂದು ಎಲ್ಲೆಡೆ ಸುದ್ದಿಯಾಯಿತು.

ಆದರೆ ಇದು ಕೇವಲ ಕಲ್ಪನೆಯ ಕೂಸು, ನಿದ್ರೆಯಲ್ಲಿ ಕಂಡ ಬಣ್ಣದ ಕನಸಿನ ಹಂದರ ಎಂದು ವರ್ಷ ಕಳೆಯುವುದರೊಳಗೆ ಅರಿವಾಗತೊಡಗಿತು. ಕಾಯಿದೆ ಅನುಷ್ಟಾನಕ್ಕಾಗಿ ಅಧಿಸೂಚನೆ ಹೊರಡಿಸಿದ ಬೆನ್ನಲ್ಲೇ ಒಂದೊಂದೇ ಸರ್ಕಾರಿ ಆದೇಶಗಳ ಮೂಲಕ ಗ್ರಾಮ ಪಂಚಾಯತ್‌ನ ಅಧಿಕಾರವನ್ನು, ಗ್ರಾಮ ಸಭೆಯ ಹಕ್ಕನ್ನು ಹಿಂಪಡೆಯುವ ಪ್ರಕ್ರಿಯೆ ಆರಂಭವಾಯಿತು. ಅಧಿಕಾರಶಾಹಿ ಆಡಳಿತದ ಹೆಬ್ಬಯಕೆಯ ತಾಂಡವ ನೃತ್ಯದ ನೈಜ ರೂಪ, ಕಪಿಮುಷ್ಟಿಯ ಪ್ರಖರತೆ ಬಯಲಿಗೆ ಬರತೊಡಗಿದ್ದು ಆಗಲೇ.

ಕಾಯಿದೆ ಜಾರಿಗೆ ಬಂದ ತಕ್ಷಣ ರಾಜ್ಯ ಸರ್ಕಾರವು, ಆ ಕಾಯಿದೆಯನ್ನು ಉಲ್ಲಂಘಿಸುವ ಎಲ್ಲಾ ಸರ್ಕಾರಿ ಆದೇಶಗಳನ್ನು ಹಿಂಪಡೆಯಬೇಕಿತ್ತು. ಅಲ್ಲದೇ ಎಲ್ಲಾ ಹಂತದ ಸರ್ಕಾರಗಳ ಜವಾಬ್ದಾರಿ ನಕ್ಷೆಯನ್ನು ನಿಯಮದ ಮೂಲಕ ಜಾರಿಗೊಳಿಸಿ ಪ್ರತಿ ಹಂತದ ಸರ್ಕಾರಕ್ಕೂ ಅದರ ಬಗ್ಗೆ ಸವಿವರವಾದ, ಸಮಗ್ರ ತರಬೇತಿಯನ್ನು ಮಾಡಬೇಕಿತ್ತು. ಆದರೆ ಇದ್ಯಾವುದನ್ನೂ ತನ್ನ ಮೊಟ್ಟಮೊದಲ ಅತ್ಯವಶ್ಯ ನಡೆ ಎಂಬುದನ್ನೇ ಗಣನೆಗೆ ತೆಗೆದುಕೊಳ್ಳದ ಸರ್ಕಾರವು ಮುಂದಿನ ಹಂತದ ಪ್ರಕ್ರಿಯೆಯಾದ ಮುನ್ನೋಟ ಯೋಜನೆಯ ತಯಾರಿಕೆ, ಆ ಕುರಿತಾದ ತರಬೇತಿಯ ಪ್ರಕ್ರಿಯೆಗೆ ಕೈಹಾಕಿತು. ಆದರೆ ಅಲ್ಲಿಯೂ ರಾಜ್ಯ ಸರ್ಕಾರವು ಎಡವಿತು. 2015ರಲ್ಲಿ ಕೇಂದ್ರ ಸರ್ಕಾರವು ನೀಡಿದ 14ನೇ ಹಣಕಾಸು ಆಯೋಗದ ಅನುದಾನದ ಹಂಚಿಕೆಯ ಕುರಿತಾದ ಆದೇಶವನ್ನು ಪರಿಪಾಲಿಸುವ ತರಾತುರಿಯಲ್ಲಿ (ತಮ್ಮ ತಮ್ಮ ರಾಜ್ಯದ ಸಂಬಂಧಪಟ್ಟ ಕಾನೂನಿಗೆ ಅನುಗುಣವಾಗಿ ಇದನ್ನು ಪಾಲಿಸತಕ್ಕದ್ದು ಎಂದು ಆದೇಶದಲ್ಲಿ ಉಲ್ಲೇಖಿತವಾಗಿದ್ದರೂ ಸಹ!) 2016ರಲ್ಲಿಯೇ ಜನ್ಮತಳೆದ ತಮ್ಮದೇ ಕೂಸಾದ ಗ್ರಾಮ ಸ್ವರಾಜ್ ಕಾಯಿದೆಯ ಅಂಶಗಳನ್ನು ಸಂಪೂರ್ಣವಾಗಿ ಬದಿಗೊತ್ತಲಾಯಿತು. 'ನಮ್ಮ ಗ್ರಾಮ ನಮ್ಮ ಯೋಜನೆ' ಎಂಬ ಶೀರ್ಷಿಕೆಯಡಿಯಲ್ಲಿ ನಡೆದ ಇಡೀ ಮುನ್ನೋಟ ಯೋಜನಾ ಪ್ರಕ್ರಿಯೆಯ ತರಬೇತಿಯ ಎಲ್ಲಾ ಹಂತಗಳೂ ಅರ್ಥ ಕಳೆದುಕೊಂಡವು. ಇದಕ್ಕೆ ಕಾರಣವೆಂದರೆ ಇಡೀ ತರಬೇತಿಯ ಪ್ರಕ್ರಿಯೆಗಳು ಕಾನೂನಿನ ಪ್ರಮುಖ ಅಂಶವಾದ 'ಗ್ರಾಮ ಸಭೆಯು ಸ್ವಯಂ ಸರ್ಕಾರದ ಮೂಲ ಘಟಕ' ಎಂಬುದನ್ನೇ ಮರೆತದ್ದು. ಗ್ರಾಮ ಪಂಚಾಯತ್‌ನಿಂದ ಜಿಲ್ಲಾ ಪಂಚಾಯತ್‌ವರೆಗಿನ ತ್ರಿಸ್ಥರ ಪಂಚಾಯತ್ ರಾಜ್ ವ್ಯವಸ್ಥೆಯ ಚುನಾಯಿತ ಪ್ರತಿನಿಧಿಗಳಿಗೆ, ಅಧಿಕಾರಿ ವರ್ಗದವರಿಗೆ, ಸಮುದಾಯ ಸಂಪನ್ಮೂಲ ವ್ಯಕ್ತಿಗಳಿಗೆ ರಾಜ್ಯ ಸರ್ಕಾರದ ಅಂಗಸಂಸ್ಥೆಯಾದ ಎ.ಎನ್.ಎಸ್.ಎಸ್.ಐ.ಆರ್.ಡಿ.ಯು ನಡೆಸಿದ ತರಬೇತಿ ಕಾರ್ಯಾಗಾರಗಳು ಗ್ರಾಮ ಸ್ವರಾಜ್ ಕಾಯಿದೆಯನ್ನು ಪಕ್ಕಕ್ಕೆ ಇಟ್ಟು ಮಾಹಿತಿ ನೀಡಿದವು. ಹಲವೆಡೆ ಗ್ರಾಮ ಸ್ವರಾಜ್ ಕಾಯಿದೆಯನ್ನು ಕಣ್ಣೆತ್ತಿಯೂ ನೋಡಿರದಿದ್ದವರನ್ನು ಸಂಪನ್ಮೂಲ ವ್ಯಕ್ತಿಗಳೆಂದು ತರಬೇತಿ ನೀಡಲು ಆಯ್ಕೆ ಮಾಡಿಕೊಂಡಿರುವುದು ಇಡೀ ಕಾನೂನನ್ನೇ ತಳ್ಳಿಹಾಕಿಬಿಟ್ಟಿತು. ಅಲ್ಲದೇ ಈ ಸಂಸ್ಥೆಯ ಮಾರ್ಗದರ್ಶನದಲ್ಲಿ ಮುನ್ನೋಟ ಯೋಜನೆಯ ಅಂಕಿ-ಅಂಶಗಳನ್ನು ಕಂಪ್ಯೂಟರೀಕರಣಗೊಳಿಸಲು 'ಪಂಚತಂತ್ರ' ಅಂತರ್ಜಾಲ ತಾಣದಡಿ ಜಿಪಿಡಿಪಿ ಎಂಬ ಹೆಸರಿನಲ್ಲಿ ರೂಪಿಸಲಾದ ತಂತ್ರಾಂಶದಲ್ಲಿ ಇಂದಿಗೂ ಕಾನೂನಿನಲ್ಲಿ ಹೇಳಿರುವ 'ಜನವಸತಿ ಸಭೆಗಳ ಉಲ್ಲೇಖವೇ ಇಲ್ಲ! ಇವೆಲ್ಲವುಗಳ ಫಲಶ್ರುತಿಯೇ ಇಡೀ ರಾಜ್ಯದಾದ್ಯಂತ ಸುಮಾರು ಏಪ್ರಿಲ್‌ನಿಂದ ಅಕ್ಟೋಬರ್‌ವರೆಗೆ ನಡೆದ ಮುನ್ನೋಟ ಯೋಜನಾ ಪ್ರಕ್ರಿಯೆಗಳು ಕೇವಲ ಆಟಕ್ಕುಂಟು ಲೆಕ್ಕಕ್ಕಿಲ್ಲ ಎಂಬಂತಾಗಿದ್ದು!

ಈ ಯೋಜನಾ ಪ್ರಕ್ರಿಯೆಗಳು ಮುಗಿಯುವ ಹಂತದಲ್ಲಿದ್ದಾಗ ಅಂದರೆ ಅಕ್ಟೋಬರ್ 2ನೇ ತಾರೀಖು ಗಾಂಧಿ ಜಯಂತಿಯಂದು ಮಾನ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವರು ರಾಜ್ಯದಾದ್ಯಂತ 5000ಕ್ಕೂ ಹೆಚ್ಚಿನ ಗ್ರಾಮ ಪಂಚಾಯತ್‌ಗಳು ತಮ್ಮ ತಮ್ಮ ಗ್ರಾಮ ಸಭೆಗಳ ಸಕ್ರೀಯ ಸಹಭಾಗಿತ್ವದಲ್ಲಿ ಗ್ರಾಮ ಸಭೆಯ ಅಧಿಕಾರವನ್ನು ಎತ್ತಿಹಿಡಿದು ಪಂಚಾಯತ್‌ಗಳ ಮುನ್ನೋಟ ಯೋಜನೆ ತಯಾರಿಸಿದ್ದು, ಇದು ಅತ್ಯಂತ ಹೆಮ್ಮೆಯ ಸಾಧನೆ ಎಂದು ಪತ್ರಿಕೆಗಳಲ್ಲಿ ಹೇಳಿಕೆ ನೀಡಿದರು, ದೃಶ್ಯ ಮಾಧ್ಯಮಗಳಲ್ಲಿ ಸಂದರ್ಶನ ನೀಡಿದರು. ಮಾನ್ಯ ಮಂತ್ರಿಗಳು ಈ ರೀತಿಯಲ್ಲಿ ಹೇಳಿಕೆ ನೀಡಿದ ಕೇವಲ 24 ಗಂಟೆಯೊಳಗೆ ರಾಜ್ಯ ಸರ್ಕಾರದ ವಸತಿ ಇಲಾಖೆಯು ಗ್ರಾಮ ಸಭೆಯ ಅತ್ಯಂತ ಪ್ರಮುಖ ಅಧಿಕಾರವಾದ ಬಸವ ವಸತಿ ಯೋಜನೆಗಳ ಫಲಾನುಭವಿಗಳ ಆಯ್ಕೆಯ ಪ್ರಕ್ರಿಯೆಯನ್ನು ಸ್ಥಗಿತಗೊಳಿಸುವಂತೆ ಆದೇಶ ನೀಡಿತು! ಅಲ್ಲದೇ ವಿವಿಧ ವೈಯಕ್ತಿಕ ಪ್ರಯೋಜನದ ಸರ್ಕಾರಿ ಯೋಜನೆಗಳಿಗೆ ಫಲಾನುಭವಿಗಳ ಆಯ್ಕೆಯ ಅಧಿಕಾರವನ್ನೂ ಸಹ ಶಾಸಕರಿಗೇ ನೀಡಲಾಯಿತು. ಅಲ್ಲಿಗೆ ಇಡೀ ಮುನ್ನೋಟ ಯೋಜನೆಯ ಪ್ರಕ್ರಿಯೆಯಲ್ಲಿ ಗ್ರಾಮ ಸಭೆಯು ಆಯ್ಕೆ ಮಾಡಿದ ಫಲಾನುಭವಿಗಳ ಪಟ್ಟಿಗೆ ಎಳ್ಳುನೀರು ಬಿಟ್ಟಂತಾಯಿತು! ಒಟ್ಟಾರೆಯಾಗಿ ಗ್ರಾಮ ಸ್ವರಾಜ್ ಕಾಯಿದೆಯ ಮೂಲಕ ಗ್ರಾಮ ಪಂಚಾಯತ್‌ಗಳನ್ನು ಸ್ವಯಂ ಸರ್ಕಾರಗಳು, ಗ್ರಾಮ ಸಭೆಗಳು ಅದರ ಮೂಲ ಘಟಕಗಳೆಂದು ಘೋಷಿಸಿದ ಸರ್ಕಾರವು ವಿಕೇಂದ್ರೀಕರಣಕ್ಕೆ ವಿರುದ್ಧವಾಗಿರುವ ಎಲ್ಲಾ ಹೆಜ್ಜೆಗಳನ್ನು ದಿನದಿಂದ ದಿನಕ್ಕೆ ಪುನಃ ಇಡಲಾರಂಭಿಸಿತು.

ಗ್ರಾಮ ಸಭೆಯ ಹಕ್ಕನ್ನು ಕಿತ್ತುಕೊಳ್ಳುವ ಈ ಪ್ರಯತ್ನವನ್ನು ವಿಕೇಂದ್ರೀಕರಣವನ್ನು ಬೆಂಬಲಿಸುವ ಪ್ರಮುಖರು, ಗ್ರಾಮ ಪಂಚಾಯತ್ ಹಕ್ಕೊತ್ತಾಯ ಆಂದೋಲನ ಪ್ರಶ್ನಿಸಲಾರಂಭಿಸಿದರು. ಪತ್ರಿಕೆಗಳು ಈ ವಿಷಯವನ್ನು ಬಸವ ವಸತಿ ಯೋಜನೆಯ ಫಲಾನುಭವಿಗಳ ಆಯ್ಕೆ ಶಾಸಕರ ತೆಕ್ಕೆಗೆ ಎಂಬಂತಹ ಶೀರ್ಷಿಕೆಯಡಿಯಲ್ಲಿ ವರದಿಗಳನ್ನು ಪ್ರಕಟಿಸಲಾರಂಭಿಸಿದವು. ಆಗ ಎಚ್ಚೆತ್ತುಕೊಂಡ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಇಲಾಖೆಯು ದಿನಾಂಕ 02-11-2016ರಂದು ಗ್ರಾಮ ಸ್ವರಾಜ್ ಕಾಯಿದೆಯಲ್ಲಿ ಫಲಾನುಭವಿಗಳ ಆಯ್ಕೆಯ ಗ್ರಾಮಸಭೆಯ ಅಧಿಕಾರದ ಕುರಿತು ಹೇಳಿರುವ ಪ್ರಕರಣಗಳನ್ನು ಉಲ್ಲೇಖಿಸಿ, ಕಾಯಿದೆಯ ಆಶಯಕ್ಕೆ ಧಕ್ಕೆಯಾಗದಂತೆ ಕ್ರಮವಹಿಸಬೇಕೆಂದು ವಸತಿ ಇಲಾಖೆಗೆ ಪತ್ರ ಬರೆಯಿತು. ಆದರೆ ವಸತಿ ಇಲಾಖೆಯು ಇದನ್ನು ಗಣನೆಗೆ ತೆಗೆದುಕೊಂಡಂತಿಲ್ಲ. ದಿನಾಂಕ 23-11-2016ರಂದು ರಾಜೀವ ಗಾಂಧಿ ಗ್ರಾಮೀಣ ವಸತಿ ನಿಗಮವು ಬಸವ ವಸತಿ ಯೋಜನೆಯಡಿ ಮಂಜೂರಾದ ಮನೆಗಳ ಗುರಿಯನ್ನು ಅನುಷ್ಟಾನಗೊಳಸುವ ಬಗ್ಗೆ ಪುನರ್‌ವಿಮರ್ಶಿಸಿದ ಆದೇಶವನ್ನು ಹೊರಡಿಸಿತು. ಆದರೆ ಈ ಆದೇಶದಲ್ಲಿಯೂ ಸಹ ಫಲಾನುಭವಿಗಳ ಆಯ್ಕೆಯ ಕುರಿತಂತೆ ಗ್ರಾಮ ಸ್ವರಾಜ್ ಕಾಯಿದೆಯಲ್ಲಿ ಹೇಳಿರುವ ಅಂಶಗಳನ್ನು ಅನುಸರಿಸಲು ಸ್ಪಷ್ಟ ನಿರ್ದೇಶನ ನೀಡದೇ ಫಲಾನುಭವಿಗಳ ಆಯ್ಕೆ ಹಾಗೂ ಮೀಸಲಾತಿ ಪ್ರಕ್ರಿಯೆಯನ್ನು ದಿನಾಂಕ 16-11-2015ರಂದು ಹೊರಡಿಸಿದ ಸರ್ಕಾರಿ ಆದೇಶದಲ್ಲಿ ತಿಳಿಸಿರುವಂತೆ ಪರಿಗಣಿಸುವುದು ಎಂದು ನಮೂದಿಸಲಾಯಿತು! ಅಲ್ಲದೇ ಗ್ರಾಮೀಣ ವಸತಿ ಯೋಜನೆಗಳ ಸಮಗ್ರ ಮಾರ್ಗಸೂಚಿಯಲ್ಲಿ ತಿಳಿಸಿರುವಂತೆ ಅನುಮೋದನೆ ಹಾಗೂ ಅನುಷ್ಟಾನಕ್ಕೆ ಸಂಬಂಧಿಸಿದಂತೆ ಕ್ರಮವಹಿಸುವುದು ಎಂದು ತಿಳಿಸಲಾಯಿತು. ಖೇದಕರ ಸಂಗತಿಯೆಂದರೆ, ಈ ಮಾರ್ಗದರ್ಶಿಯ ಪ್ರಕಾರ ಫಲಾನುಭವಿಗಳ ಆಯ್ಕೆಯ ಅಂತಿಮ ನಿರ್ಣಯ ಜಾಗೃತ ಸಮಿತಿಯದ್ದು. ಇದರರ್ಥ ಅದರ ಮುಖ್ಯಸ್ಥರಾದ ಶಾಸಕರದ್ದು!


ಗ್ರಾಮ ಪಂಚಾಯತ್‌ನಲ್ಲಿ ಅನುಷ್ಠಾನಗೊಳ್ಳುವ ಎಲ್ಲಾ ರೀತಿಯ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಮತ್ತು ಪರಿಸರ ಅಭಿವೃದ್ಧಿ ಕಾರ್ಯಕ್ರಮಗಳ, ಕೇಂದ್ರ, ರಾಜ್ಯ ಹಾಗೂ ಜಿಲ್ಲಾ ವಲಯಗಳ ಎಲ್ಲಾ ಯೋಜನೆಗಳ, ಸ್ಕೀಮ್‌ಗಳನ್ನು ಯೋಜಿಸುವಲ್ಲಿ, ಅನುಷ್ಟಾನಕ್ಕೆ ತರುವಲ್ಲಿ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಾಡುವಲ್ಲಿ ಸ್ವಯಂಸರ್ಕಾರದ ಘಟಕವಾದ ಗ್ರಾಮ ಸಭೆಯ ಅಧಿಕಾರವನ್ನು ಚಾಕಚಕ್ಯತೆಯಿಂದ ಮೂಲೆಗುಂಪಾಗಿಸಿ, ಬಸವ ವಸತಿ ಯೋಜನೆಯ ಫಲಾನುಭವಿಗಳನ್ನು ನಿರ್ಧರಿಸುವ ಅಧಿಕಾರ ಶಾಸಕರ ಅಧ್ಯಕ್ಷತೆಯಲ್ಲಿ ಕಾರ್ಯನಿರ್ವಹಿಸುವ ಜಾಗೃತ ಸಮಿತಿಗೆ ಎಂಬುದನ್ನು ಮೇಲೆ ಹೇಳಿರುವ ಈ ಮಾರ್ಗಸೂಚಿಯನ್ನು (ದಿನಾಂಕ 16-11-2015ರ ಸರ್ಕಾರಿ ಆದೇಶದೊಂದಿಗಿನ ಅನುಬಂಧ) ಆಳವಾಗಿ ಅಭ್ಯಸಿಸಿ, ಇದಕ್ಕೆ ಸಂಬಂಧಿಸಿದಂತೆ ಈ ವರ್ಷ ಒಂದರ ಬೆನ್ನಿಗೊನ್ನೊಂದರಂತೆ ಹೊರಡಿಸಿದ ಎಲ್ಲಾ ಸರ್ಕಾರಿ ಆದೇಶಗಳನ್ನು ಇದರೊಂದಿಗೆ ತಾಳೆಹಾಕಿ ನೋಡಿದರೆ ಸ್ಪಷ್ಟವಾಗಿ ಗೋಚರಿಸುತ್ತದೆ. ಈ ಇಡೀ ಮಾರ್ಗಸೂಚಿಯು, ಫಲಾನುಭವಿಗಳ ಆಯ್ಕೆಯ ಪಟ್ಟಿಯಲ್ಲಿ ಅನರ್ಹರು ಸೇರಿದ್ದರೆ ಕಾರಣ ಸಹಿತ ಅದನ್ನು ದಾಖಲಿಸಿ, ಪುನರಾಯ್ಕೆ ಮಾಡುವಂತೆ ಗ್ರಾಮ ಸಭೆಗೆ ಶಿಫಾರಸ್ಸು ಮಾಡುವುದನ್ನು ಎಲ್ಲಿಯೂ ಹೇಳಿಲ್ಲ. ಬದಲಾಗಿ ಅನರ್ಹರೆಂದು ನಿರ್ಣಯಿಸುವ ಅಧಿಕಾರವನ್ನು ಜಾಗೃತ ಸಮಿತಿಗೆ ನೀಡಿದೆ. ಇದರರ್ಥ ಫಲಾನುಭವಿಗಳ ಆಯ್ಕೆಯ ನಿರ್ಣಾಯಕರು ಶಾಸಕರು! ಅಧಿಕಾರದ ಹಪಾಹಪಿ ಕಾನೂನು ರೂಪಿಸುವವರನ್ನೇ, ಅದರ ಲೋಪದೋಷಗಳನ್ನು ಸರಿಪಡಿಸುವ ಜವಾಬ್ದಾರಿ ಹೊತ್ತವರನ್ನೇ ಹೇಗೆ ಕಾನೂನು ಭಂಜಿಸುವಂತೆ ಮಾಡುತ್ತದೆ ಎಂಬುದಕ್ಕೆ ಇದು ಸ್ಪಷ್ಟ ನಿದರ್ಶನ.

ರಾಜ್ಯ ಸರ್ಕಾರದ ಎಲ್ಲಾ ಇಲಾಖೆಗಳೂ ಗ್ರಾಮ ಪಂಚಾಯತ್ ಅನ್ನು ತಮ್ಮ ಕಾರ್ಯಕ್ರಮಗಳನ್ನು ಅನುಷ್ಟಾನಗೊಳಿಸಲು ಇರುವ ವಿತರಣಾ ಮಧ್ಯವರ್ತಿಗಳಂತೆ ಬಳಸಿಕೊಳ್ಳುತ್ತಿವೆ. ಗ್ರಾಮ ಸಭೆಗಳನ್ನು ತಮ್ಮ ರಾಜಕೀಯ ಮೇಲಾಟದ ಮೈದಾನಗಳಂತೆ ಕಾಣುತ್ತಿವೆ. ಇದರೊಂದಿಗೆ ಸರ್ಕಾರದ ವಿವಿಧ ಇಲಾಖೆಗಳ ಜಟಾಪಟಿಗೆ, ಕಿತ್ತಾಟಕ್ಕೆ ಬಲಿಯಾಗುತ್ತಿರುವುದು ಗ್ರಾಮ ಸಭೆಯ ಹಕ್ಕು ಮತ್ತು ಅಧಿಕಾರ. ತಂದೆ-ತಾಯಿಯರ ಜಗಳಕ್ಕೆ ಕೂಸು ಬಡವಾದಂತೆ ಗ್ರಾಮ ಸಭೆಯ ಪರಿಸ್ಥಿತಿಯಾಗಿರುವುದು ವಿಪರ್ಯಾಸವೇ ಸರಿ. ಗ್ರಾಮ ಸ್ವರಾಜ್ ಕಾಯಿದೆಯ ಅಂಶಗಳನ್ನು ಗ್ರಾಮೀಣಾಭಿವೃದ್ಧಿ ಇಲಾಖೆಯು ವಸತಿ ಇಲಾಖೆಯ ಗಮನಕ್ಕೆ ತಂದರೂ ಅಧಿಕಾರ ಪಡೆದುಕೊಳ್ಳುವ ಹಠ ಸಾಧಿಸಲು ಪುನಃ ವಿಕೇಂದ್ರೀಕೃತ ವ್ಯವಸ್ಥೆಗೆ ಕೈಹಾಕಲು ಪ್ರಯತ್ನಗಳು ನಡೆಯುತ್ತಿವೆ.

ತನ್ಮಧ್ಯೆ ಗ್ರಾಮೀಣಾಭಿವೃದ್ಧಿ ಇಲಾಖೆಯು 2016ರ ನವೆಂಬರ್ ತಿಂಗಳಾಂತ್ಯದಲ್ಲಿ ಗ್ರಾಮ ಸ್ವರಾಜ್ ಕಾಯಿದೆಗೆ ವ್ಯತಿರಿಕ್ತವಾಗಿರುವಂತಹ ಪ್ರಚಲಿತದಲ್ಲಿರುವ ಕೆಲವೊಂದು ಸರ್ಕಾರಿ ಆದೇಶಗಳನ್ನು ಹಿಂಪಡೆದು, ಈ ಕಾನೂನಿಗನುಗುಣವಾಗಿರುವಂತೆ ಪುನರ್ ಆದೇಶ ಹೊರಡಿಸಿತು. ಆದರೆ ಈ ಯಾವುದೇ ಆದೇಶದಲ್ಲಿ ಮೇಲೆ ಹೇಳಿರುವ ವಸತಿ ಯೋಜನೆ ಫಲಾನುಭವಿಗಳ ಆಯ್ಕೆಗೆ ಸಂಬಂಧಿಸಿದ ಆದೇಶ ಮತ್ತು ಮಾರ್ಗಸೂಚಿಯ ಬಗ್ಗೆ ಸರ್ಕಾರ ಸೊಲ್ಲೆತ್ತಲಿಲ್ಲ!

ಇಂತಹ ಪರಿಸ್ಥಿತಿಯಲ್ಲಿಯೂ ನವೆಂಬರ್ ತಿಂಗಳಾಂತ್ಯದಲ್ಲಿ ಬೆಳಗಾವಿಯಲ್ಲಿ ನಡೆದ ಚಳಿಗಾಲದ ಅಧಿವೇಶನದ ಸಮಯದಲ್ಲಿ ಸ್ಥಳೀಯಾಡಳಿತ ಸಂಸ್ಥೆಗಳಿಂದ ಆಯ್ಕೆಯಾದ ರಾಜ್ಯದ ವಿಧಾನಮಂಡಲದ 25 ಸದಸ್ಯರೂ ಒಕ್ಕೊರೊಲಿನಿಂದ ಈ ರೀತಿಯ ಅಧಿಕಾರದ ಹಪಾಹಪಿತನದ ವಿರುದ್ಧ ಪ್ರಬಲವಾಗಿ ಧ್ವನಿ ಎತ್ತಿ, ಸ್ಥಳೀಯಾಡಳಿತ ಸಂಸ್ಥೆಗಳ ಸ್ವಾಯತ್ತತೆಗಾಗಿ ಒತ್ತಾಯ ಪಡಿಸಿರುವುದು ನಿಜಕ್ಕೂ ಒಂದು ಆಶಾಕಿರಣದಂತಿದೆ. ಬಸವ ವಸತಿ ಯೋಜನೆಗೆ ಸಂಬಂಧಿಸಿದಂತೆಯೇ ಸರ್ಕಾರ ಹೊರಡಿಸಿರುವ ಆದೇಶಗಳ ಕುರಿತು ಪ್ರಶ್ನಿಸಿದಾಗ ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಈ ಆದೇಶಗಳು ವಸತಿ ಇಲಾಖೆಯಿಂದ ಹೊರಡಿಸಿದ್ದು, ನಮ್ಮ ಇಲಾಖೆಯಿಂದ ಅಲ್ಲ ಎಂದು ಉತ್ತರಿಸಿ ನುಣುಚಿಕೊಳ್ಳಲೆತ್ನಿಸಿದಾಗ, ಗ್ರಾಮ ಸಭೆಯ ಹಕ್ಕನ್ನು ರಕ್ಷಿಸುವುದು, ಗ್ರಾಮ ಪಂಚಾಯತ್‌ನ ಅಧಿಕಾರವನ್ನು ಎತ್ತಿಹಿಡಿಯುವುದು, ಕಾನೂನು ಉಲ್ಲಂಘನೆಗಳನ್ನು ತಡೆಯುವುದು ಸರ್ಕಾರವಾಗಿ ತಮ್ಮ ಜವಾಬ್ದಾರಿ ಎಂಬುದನ್ನು ಈ ಎಲ್ಲಾ ಶಾಸಕರು ವಿವರಣಾತ್ಮಕವಾಗಿ ಉದಾಹರಣೆ ಸಹಿತ ಸರ್ಕಾರದ ಪ್ರತಿನಿಧಿಯಾದ ಮಾನ್ಯ ಮಂತ್ರಿಗಳ ಮುಂದೆ ಪ್ರಚುರಪಡಿಸಿದ ರೀತಿ ಬಹುಶಃ ವಿಧಾನಮಂಡಲದ ಇತಿಹಾಸದಲ್ಲೇ ಒಂದು ಮೈಲಿಗಲ್ಲಾಗಿದೆ.

ಮಾನ್ಯ ಶಾಸಕರೆಲ್ಲರ ಕಾಳಜಿಯನ್ನು ಅರ್ಥೈಸಿಕೊಂಡು, ಅವರ ಸಲಹೆಗಳಿಗೆ ಓಗೊಟ್ಟು ಸರ್ಕಾರ ಗ್ರಾಮ ಸಭೆಯ ಪಾರಮ್ಯವನ್ನು ಎತ್ತಿ ಹಿಡಿಯಲೇಬೇಕಾದ ಸಂದರ್ಭ ಇದಾಗಿದೆ. ಆಗ ಮಾತ್ರ ವರ್ಷಾರಂಭದಲ್ಲಿ ಕಂಡ ಕನಸು, ಬಿತ್ತಿದ ಆಸೆಯ ಬೀಜ ಚಿಗುರೊಡೆದು ಬೆಳೆಯಲು ಸಾಧ್ಯ. ಈ ನಿಟ್ಟಿನಲ್ಲಿ ಸರ್ಕಾರ ಎಡವಿದಾಗ ಅದರ ಕಿವಿ ಹಿಂಡಿ ಸರಿದಾರಿಗೆ ತರಲು, ತಮ್ಮ ಹಕ್ಕು ಮತ್ತು ಅಧಿಕಾರಗಳನ್ನು ಉಳಿಸಿಕೊಳ್ಳಲು ಗ್ರಾಮ ಸರ್ಕಾರದ ಪ್ರತಿನಿಧಿಗಳು ಒಟ್ಟಾಗಿ ಹೋರಾಟ ನಡೆಸಲೇಬೇಕಾಗಿದೆ. ಇಲ್ಲವಾದಲ್ಲಿ ಬೆಳೆಯುವ ಸಿರಿಯನ್ನು ಮೊಳಕೆಯಲ್ಲಿಯೇ ನೋಡು ಎಂಬಂತೆ, ಮಹದಾಸೆ ಹೊತ್ತು ಜಾರಿಗೆ ಬಂದಂತಹ ಮಹತ್ತರವಾದ ಗ್ರಾಮ ಸ್ವರಾಜ್ ಕಾಯಿದೆ ಅನುಷ್ಟಾನಗೊಳ್ಳುವ ಮೊದಲೇ ದಿಕ್ಕುತಪ್ಪಿ, ಚೆಲ್ಲಾಪಿಲ್ಲಿಯಾಗಿ ಇತಿಹಾಸದ ಪುಟಗಳಲ್ಲಿ ಪುಸ್ತಕವಾಗಿಯೇ ಉಳಿದು ಹೋಗುವ ಕಾಲ ನಮ್ಮೆಲ್ಲರೆದುರು ಒಂದು ದಿನ ಧುತ್ತೆಂದು ಬಂದು ನಿಲ್ಲುತ್ತದೆ. ಹೊಸ ವರ್ಷದತ್ತ ದಾಂಗುಡಿ ಇಡುತ್ತಿರುವ ಈ ಸಂದರ್ಭದಲ್ಲಿ ನಾವೆಲ್ಲರೂ ಸಂಘಟಿತರಾಗೋಣ... ...ಒಟ್ಟಾಗಿ ನಿಶ್ಚಲ, ದೃಢ ಹೆಜ್ಜೆ ಇಡೋಣ... ...ಗ್ರಾಮ ಸ್ವರಾಜ್ ಸ್ಥಾಪನೆಗೆ ಮುನ್ನುಡಿ ಬರೆಯೋಣ.



**ಕೃಪಾ ಎಂ.ಎಂ.**
**ದಿ ಕನ್ಸರ್ನ್ಡ್ ಫಾರ್ ವರ್ಕಿಂಗ್ ಚಿಲ್ಡ್ರನ್ ಸಂಸ್ಥೆ ಹಾಗೂ ಗ್ರಾಮ ಪಂಚಾಯತ್ ಹಕ್ಕೊತ್ತಾಯ ಆಂದೋಲನ ಕಾರ್ಯಕರ್ತರು.**